**ಬಿ.ಎ/ಬಿ.ಎಚ್.ಎಮ್/ಬಿ.ಎಸ್.ಡಬ್ಲೂ**

**ಮೊದಲನೇ ಸೆಮಿಸ್ಟರ್**



# ಪರಿವಿಡಿ

## I.ಕಾವ್ಯ ಭಾಗ


೧. ನೆಲಕ್ಕಾರೊಳಂ ಪಂಥಮುಂಟೇ – ಪಂಪ ೧–೫

೩. ವಚನಗಳು – ಬಸವಣ್ಣ, ಆಯ್ದಕ್ಕಿ ಮಾರಯ್ಯ, ಅಮುಗೆ ರಾಯಮ್ಮ ೬–೯

೨. ದೇವರು ರುಜು ಮಾಡಿದನು – ಕುವೆಂಪು ೧೦–೧೨

೪. ಕವನ ಹುಟ್ಟುವ ಸಮಯ – ಕೆ.ಎಸ್. ನರಸಿಂಹಸ್ವಾಮಿ ೧೩–೧೪


## II . ಕಥಾ ಸಾಹಿತ್ಯ


೧. ತಿರುಕಣ್ಣನ ಮತದಾನ – ನಿರಂಜನ ೧೫–೨೭

೨. ಪಂಜ್ರೊಳ್ಳಿ ಪಿಶಾಚಿಯ ಸವಾಲು – ಕೆ.ಪಿ. ಪೂರ್ಣಚಂದ್ರ ತೇಜಸ್ವಿ ೨೮–೩೯

೩. ಡಾಂಬರು ಬಂದುದು – ದೇವನೂರು ಮಹಾದೇವ ೪೦–೪೯


## III .ಜಾನಪದ


೧. ತನ್ನನ್ನು ತಾನು ವರಿಸಿದ ರಾಜಕುಮಾರ
– ಸಂಗ್ರಹ: ಎ.ಕೆ. ರಾಮಾನುಜನ್ ೫೦–೫೫

೨. ಕೆಂಪೇಗೌಡರ ಲಾವಣಿ – ಸಂಗ್ರಹ: ಹೆಚ್.ಎಲ್. ನಾಗೇಗೌಡರು ೫೬–೬೬

೩. ಆದಿವಾಸಿ ಜಾನಪದ – ಜೀ.ಶಂ. ಪರಮಶಿವಯ್ಯ ೬೭–೭೭


## IV . ಲೇಖನ ವೈವಿಧ್ಯ


೧. ಮಾನವತಾವಾದ ಎದುರಿಸುತ್ತಿರುವ ಬಿಕ್ಕಟ್ಟಗಳು (ಭಾಗಗಳು)
– ಜಿ.ಎಸ್. ಶಿವರುದ್ರಪ್ಪ ೭೮–೮೮

೨. ಬೆವರಿನ ಮನುಷ್ಯ ಡಾ. ರಾಜಕುಮಾರ್
– ಪ್ರೊ. ಬರಗೂರು ರಾಮಚಂದ್ರಪ್ಪ ೮೯–೧೦೨

೩. ಕನ್ನಡವೇ ನನ್ನ ಧರ್ಮ – ಜಯದೇವಿ ತಾಯಿ ಲಿಗಾಡೆ ೧೦೩–೧೧೦

# I ಕಾವ್ಯ ಭಾಗ

## ೧. ನೆಲಕ್ಕಾರೊಳಂ ಪಂಥಮುಂಟೇ

– ಪಂಪ

**ಆಶಯ :**

ಅರಿಷಡ್ವರ್ಗಗಳಾದ ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರಗಳು ಮನುಷ್ಯನಲ್ಲಿ ಅತಿಯಾದಾಗ ಸುಂದರ ಬದುಕಿಗೆ ಆಸರೆಯಾಗಬೇಕಾದ ಪ್ರೀತಿ, ಪ್ರೇಮ, ದಯೆ, ಕರುಣೆ ಅನುಕಂಪಗಳು ಮರೆಯಾಗುತ್ತವೆ. ಇದರ ಪರಿಣಾಮ ಎಲ್ಲೆಲ್ಲೂ ಅತೃಪ್ತಿ – ಅಸಹನೆಗಳು ತಾಂಡವವಾಡುತ್ತವೆ. ಬದುಕು ಅರ್ಥಕಳೆದುಕೊಂಡು, ಗೊಂದಲದ ಗೂಡಾಗುತ್ತದೆ ಎಂಬುದನ್ನು 'ಪಂಪ' ತನ್ನ 'ಆದಿಪುರಾಣ'ದ ಭರತ–ಬಾಹುಬಲಿಯ ಪ್ರಸಂಗದಲ್ಲಿ ಭೌತಿಕವಾದ ರಾಜ್ಯ–ಸಂಪತ್ತಿಗಿಂತ ಅಂತರಂಗದ ಶಾಂತಿ–ತೃಪ್ತಿಯೇ ಶ್ರೇಷ್ಠವಾದದ್ದು ಎಂಬುದನ್ನು ಇಲ್ಲಿ ಸಾರಿದ್ದಾನೆ.

ಎನ್ನಣುಗದಮ್ಮನಿಲ್ಲದೆ
ಬಿನ್ನನೆ ಸಾಮ್ರಾಜ್ಯಮಿನಿತುಮಾದೆಱಕಮುಮ
ತ್ತ್ಯುನ್ನತಿಯಲ್ತೆನಗಾತಂ
ಮುನ್ನೆಱಗದೊಡೆಂದು ಬೆಸಸಿಯಟ್ಟಿದನೆನ್ನಂ

ವ॥ ಎನೆ ಭರತ ಚಕ್ರವರ್ತಿಯ ದೂತನೆಂಬುದುಂ ಬಾಹುಬಲಿ ಕುಮಾರಂ ಕೋಪಗರ್ಭಸ್ಮಿತಂಬೆರಸು

ಧನಮೆಂಬುದು ವಿಭುಗೆ ಯಶೋ
ಧನಮದನಿಂತಳಿಪಿ ಕಳಿಪಿ ಕಿಡೆ ಮಾಡಿರ್ದಾ
ತನ ಪಡೆದ ಧನಮದೇತಱ
ಧನಮದಱಿಂ ನಿಧನಮೆಯ್ದಿದರ್ ಪಲರರಸರ್



ಪಿರಿಯಣ್ಣಂಗೆಱಗುವುದೇಂ
ಪರಿಭವಮೇ ಕೀೞ್ ನೆತ್ತಿಯೊಳ್ ಬಾಳಂ ನಿ
ರ್ನೆರಮೂೞ್ ಚಲದಿನೆಱಗಿಸ
ಲಿರೆ ಭರತಂಗೆಱಗುವೆಱಕಮಂಜಮೆಯಲ್ತೇ

ಭರತಂ ಷಟ್ಖಂಡಭೂವಲ್ಲಭನೆನೆ ಸಿರಿಯಂ ಗೆಂಟಱೊಳ್ ಕೇಳ್ದು ರಾಗಂ
ಬೆರಸಿರ್ಪೀ ನಣ್ಪೆ ಸಾಲ್ಗುಂ ಕರೆದೊಡೆ ಬೆಸನೇನೆಂಬ ಜೀಯೆಂಬ ದೇವಂ
ಬರಸೆಂಬಾಳೆಂಬ ದೈನ್ಯಕ್ಕೆಲವೊ ತನುವನಾನೊಡ್ಡುವಂತಾದಿದೇವಂ
ಪುರುದೇವಂ ದೇವದೇವಂ ಕುಡೆ ಪಡೆದ ನೆಲಕ್ಕಾರೊಳಂ ಪಂಥಮುಂಟೇ

ನೆಗಟ್ದೇ ಷಟ್ಖಂಡ ಭೂಮಂಡಲಮನನಿತುಮಂ ಗೆಲ್ವಖಂಡಪ್ರತಾಪಂ
ನೆಗಟ್ದಂತಾಱುಂ ಬಲಂಗಳ್ವೆರಸೊದವಿದ ಸಂಗ್ರಾಮಸಂರಂಭದಿಂದಂ
ಬಗೆಯಂ ಪ್ರಾಣಪ್ರಿಯಸ್ತ್ರೀಜನತನಯಧನವ್ರಾತದೊಳ್ ಮಾಡದಾರ್ತಾ
ಜಿಗೆ ಬಂದೊಡ್ಡಲ್ಕೆ ಪೇಟ್ಸಿಂಗರನಿಕಷದೊಳೆಮ್ಮಂದಮಂ ನೀನೆ ಕಾಣ್ಬೈ

ಕಿಸುಸಂಜೆವೆರಸು ಕಟ್ಟಿಲೆ
ಪಸರಿಸಿದಪುದೆನಿಸಿ ಕಣ್ಣ ಕೆಂಪುಂ ಭ್ರುಕುಟಿ
ಪ್ರಸರಾಂಧಕಾರಮುಂ ದೆಸೆ
ದೆಸೆಗೆಸೆದುವು ಬಾಹುಬಲಿನೃಪಾಸ್ಥಾಯಿಕೆಯೊಳ್

ವ॥ ಅನ್ನೆಗಂ ಚಕ್ರವರ್ತಿಯ ದೂತಂ ಸಾಕೇತಪುರಮನೆಯ್ದಿವಂದಾಸ್ಥಾನ ಮಂಟಪದೊಳ್ ಇರ್ದ ಚಕ್ರವರ್ತಿಯಂ ಕಂಡು ಪೊಡೆಮಟ್ಟು

ನಿನಗೀ ಷಟ್ಖಂಡ ಭೂಮಂಡಲಮೆಱಗಿದುದೇಂ ಸಾಲದೇ ಬೇಡದುದ್ವೃ
ತ್ತನೊಳಿನ್ನೇನೆಂದು ದೇವರ್ಕಡೆಗಣಿಸಿರೆ ಸೌದರ್ಯಮಂ ಕಾದ ಪೆಂಪೀ
ವನಧಿದ್ವೀಪಾಂತರಾಳ ಕ್ಷಿತಿಯೊಳೆಸಗುವಾಕ್ಷೇಪಮಂ ಮಾಣ ನೀಂ ಕ್ರೋ
ಧನನಾಗಲ್ ನಿನ್ನ ತಮ್ಮಂ ನಿನಗೆಱಗನಿದಂ ನಂಬು ರಾಜಾಧಿರಾಜಾ

ವ॥ ತಱುವಾಯಿಂ ದೃಷ್ಟಿಯುದ್ಧ ಜಲಯುದ್ಧ ಮಲ್ಲಯುದ್ಧದೊಳ್ ಬಾಹುಬಲಿ ಕುಮಾರಂ ಭರತಚಕ್ರವರ್ತಿಯಂ ಗೆಲಲ್ ಆಗಳ್

ಧರೆಯಂ ಪರ್ಬಿರ್ದುದೀ ಬಾಹುಬಲಿನೃಪಯಶೋದುಂದುಭಿಧ್ವಾನವೆಂಬಂ
ತಿರೆ ದೇವಾನೀಕಿನೀದುಂದುಭಿರವಮಮರೀವೃಂದಮಾಂಗಲ್ಯಗೇಯ।
ಸ್ವರದೊಳ್ ಕೈಗೂಡಿ ಪೊಣ್ಮುತ್ತಿರೆ ಮುದಿತಸುರಾನಂದಬಾಷ್ಪೋದಬಿಂದೂ
ತ್ಕರಮೆಂಬಂತಾಗೆ ತಂದತ್ತರಲ ಮಟಿಗಳಂ ಪುಷ್ಪಮೇಘಪ್ರತಾನಂ॥

ತನಗಲ್ಲದುದಂ ಮಾಡಿದ
ನಿನಿಸಂ ಚಕ್ರೇಶನೆಂಬ ಕುಲವೃದ್ಧರ ಭೂ।
ವನಿತಾಧೀಶರ ನುಡಿಗ
ಳ್ಗೆ ನಾಣ್ಚಿದಂ ಭರತರಾಜನವನತಮಕುಟಂ॥

ಕಳೆದಿಡುವುದೆ ಕಷ್ಟಂ ಭೂ
ತಳರಾಜ್ಯವಿಮೋಹಮಚಿರರುಚಿಸಂಚಳಮಿಂ।
ತಳವುಗಿಡಿಸಿದುದು ಮನುಕುಲ
ತಿಳಕನುಮಂ ಖಳಮಹೀಶರುಟಿದವರಳವೇ॥

ಸೋದರರೊಳ್ ಸೋದರರಂ
ಕಾದಿಸುವುದು ಸುತನ ತಂದೆಯೊಡೆಯೊಳ್ ಬಿಡದು।
ತ್ಪಾದಿಸುವುದು ಕೋಪಮನಳ
ವೀ ದೊರೆತೆನೆ ತೊಡರ್ವುದೆಂತು ರಾಜ್ಯಶ್ರೀಯೊಳ್॥

ಇನಿಯವು ಮೊದಲೊಳ್ ನಂಜಿನ
ಪನಿವೊಲ್ ಬಟಿಕೆಯ್ದೆ ಮುಳಿದು ಕೊಂದಿಕ್ಕುವುವಿಂ।
ತೆನೆಯೆನೆ ವಿಷಯಸುಖಾಸ್ವಾ
ದನದೊಳ್ ಲಂಪಟರಿದೇಕೆಯೋ ನರಪಶುಗಳ್॥

ಕಿಡುವೊಡಲ ಕಿಡುವ ರಾಜ್ಯದ
ಪಡೆಮಾತುಗೊಳಲ್ಕಮೆನ್ನ ಮೆಯ್ಯುಗಿದಪುದೀ।
ಗಡೆ ಜೈನದೀಕ್ಷೆಯಂ ಕೊಂ
ಡಡಿಗೆಱಗಿಸುವೆಂ ಸಮಸ್ತಸುರಸಮುದಯಮಂ॥



ಎಂದಿಂತು ಬಗೆದು ಭರತನ
ನೆಂದಂ ಚಕ್ರೇಶ ಸಿಗ್ಗನುಟಿ ಮುಳಿಸಂ ನೀ।
ನೆಂದಿಂಗಂ ಬಿಸುಡೀ ತ
ಮ್ಮಂದಿರೊಳಿಂತಿಂತು ಕಟ್ಟುವರ್ಪುದು ಪೆಂಪೇ॥

ನಿನ್ನೀ ಬೆಸಸಿದ ಚಕ್ರಮ
ದೆನ್ನೀ ದೇಹಾದ್ರಿಯಂ ಗೆಲಲ್ ನೆಱೆಯದು ನೀಂ।
ಬಿನ್ನನಿದೇಕಿರ್ಪೆಯದೆಂ
ತೆನ್ನ ಗೆಲಲ್ ವಜ್ರಗಿರಿಯನಾರ್ಕುಮೆ ವಜ್ರಂ

ನೆಲಸುಗೆ ನಿನ್ನ ವಕ್ಷದೊಳೆ ನಿಶ್ಚಳಮೀಭಟಖಡ್ಗಮಂಡಲೋ
ತ್ಪಲವನ ವಿಭ್ರಮಭ್ರಮರಿಯಪ್ಪ ಮನೋಹರಿ ರಾಜ್ಯಲಕ್ಷ್ಮಿ ಭೂ
ವಲಯಮನಯ್ಯನಿತ್ತುದುಮನಾಂ ನಿನಗಿತ್ತೆನಿದೇವುದಣ್ಣ ನೀ
ನೊಲಿದ ಲತಾಂಗಿಗಂ ಧರೆಗಮಾಟಿಸಿದಂದು ನೆಗಟ್ತೆ ಮಾಸದೇ

ಅವಧರಿಸದೆ ನಿನ್ನೊಳ್ ಪಿರಿ
ದವಿನಯಮಂ ನೆಗಟ್ದ ದೋಷಮಂ ತಪದೊಳ್ ನೀ
ಗುವೆನಸದಾಗ್ರಹಮಂ ಬಿಸು
ಡುವುದೊರ್ಮೆಗೆ ಮಱೆವುದೆನ್ನ ದುರ್ವಿಳಸನಮಂ

ವ॥ ಎಂದು ಬಾಹುಬಲಿ ಕುಮಾರಂ ತಪಶ್ಚರಣ ನಿಶ್ಚಳನಿಶ್ಚಯ ಮನನಾದಾಗಳ್

ಮನದೊಳ್ ಮುಂ ಪುದಿದಿರ್ದ ಕೋಪಮನಿತಂ ತೊಳ್ದಾಗಳೆತ್ತೆತ್ತಗೆ
ಯ್ದನಿದಂ ತಮ್ಮನೊಳೆಂಬುದೊಂದುಪಶಮಂ ಕೈಗಣ್ಮೆ ನೀನೊರ್ಬನೈ
ಮನುವಂಶಕ್ಕೆ ಲಲಾಮನಪ್ಪನುಜನೈ ಬೇಡಮ್ಮ ನೀನುಂ ತಪೋ
ವನಮಂ ಸಾರ್ವುದುಮಾನದಾರ್ಗೆ ಮೆಱೆವೆಂ ಮತ್ತಾಜ್ಯಸಾಮ್ರಾಜ್ಯಮಂ

ನಿಜಪಾದಾಂಬುರುಹಕ್ಕೆ ಪಾದ್ಯವಿಧಿಯಂ ನೇತ್ರಾಂಬುವಿಂ ಮಾಡುವ
ಗ್ರಜನತ್ಯುನ್ನತಮಪ್ಪ ಮಸ್ತಕದ ಮೇಗೋರಂತೆ ಪಾಯ್ದಾತ್ಮ ಬಾ
ಷ್ಪಜಳೌಘಂಗಳಿನಂದು ಬಾಹುಬಲಿ ತನ್ನಿಂದಂ ನಿಧೀಶಂಗೆ ವಂ
ಶಜರಾಜ್ಯಾಭಿಷವೋತ್ಸವಂ ನೆಗಟ್ದಿದೆಂಬಾಶಂಕೆಯಂ ಮಾಡಿದಂ

## ಕವಿ ಪರಿಚಯ

**ಪಂಪ :** ಈ ಕಾವ್ಯಭಾಗವನ್ನು ಕನ್ನಡದ ಆದಿಕವಿ ಮತ್ತು ನಾಡೋಜನೆಂಬ ಮನ್ನಣೆಗೆ ಪಾತ್ರನಾಗಿರುವ ಪಂಪ ಮಹಾಕವಿಯ ಆದಿಪುರಾಣದಿಂದ ಸಂಗ್ರಹಿಸಿದೆ. ಕವಿ ಕಲಿ ಆಗಿದ್ದ ಪಂಪನ ಕಾಲ ಹತ್ತನೆಯ ಶತಮಾನ. ಪಂಪ ಜೈನಧರ್ಮಕ್ಕೆ ಸೇರಿದವನು ಅರಿಕೇಸರಿಯ ಆಶ್ರಯದಲ್ಲಿದ್ದವನು ಆದಿಪುರಾಣ, ವಿಕ್ರಮಾರ್ಜುನ ವಿಜಯ (ಪಂಪಭಾರತ) ಇವನ ಕೃತಿಗಳು. ವಸ್ತುವಿನಲ್ಲಿ ಆಗಮಿಕ–ಲೌಕಿಕಗಳನ್ನು ನಿರೂಪಣೆಯಲ್ಲಿ ಧರ್ಮ ಕಾವ್ಯಧರ್ಮಗಳನ್ನು ಭಾಷೆಯಲ್ಲಿ ಮಾರ್ಗದೇಶಿಗಳನ್ನು ಅಳವಡಿಸಿಕೊಂಡು ಮಾರ್ಗ ನಿರ್ಮಿಸಿದ ಹೆಗ್ಗಳಿಕೆ ಇವನದು.

**ಕಠಿಣ ಪದಗಳ ಅರ್ಥ :**

ಚಕ್ರ–ಚಕ್ರರತ್ನ; ಅಳಿಪಿ–ಆಶೆಪಟ್ಟು; ಕೀಜ್–ಊರಿ–ಚುಚ್ಚಿ; ಬಾಳಂ–ಖಡ್ಗವನ್ನು; ಗೆಂಟರೊಳ್–ದೂರದಿಂದ; ಪುರದೇವ–ಆದಿದೇವ ಭರತ ಬಾಹುಬಲಿಯರ ತಂದೆ; ನಿಕಷ–ಒರೆಗಲ್ಲು; ಭ್ರುಕುಟಿ–ಹುಬ್ಬು; ಸೌದರ್ಯ–ಸೋದರತೆ; ಧ್ವಾನ–ಧ್ವನಿ; ಅರಲ ಮಳೆ–ಹೂಮಳೆ; ವಕ್ಷ–ಹೃದಯ; ಆಟಿಸು–ಆಸೆಪಡು; ಅಸದಾಗ್ರಹ–ಅಸತ್ ಅಗ್ರಹ, ಮನಃಕಷಾಯ; ತೂಳ್–ಬಿಸುಟು; ಉಪಶಮ–ಉಪಶಾಂತಿ.

**ಪ್ರಶ್ನೆಗಳು :**

೧. ಅಧಿಕಾರ ರಾಜಕಾರಣದ ಮುಖಗಳನ್ನು ಈ ಸಂಘರ್ಷ ಹೇಗೆ ಪ್ರತಿನಿಧಿಸುತ್ತದೆ?

೨. ಭರತಂಗೆರಗುವೆರಕ ಮಂಜುಮೆಯಲ್ತೇ – ಈ ಮಾತಿನ ಆಶಯವನ್ನು ವಿಸ್ತರಿಸಿ.

೩. ನೆಲಸುಗೆ ನಿನ್ನ ವಕ್ಷದೊಳೆ... ಈ ಪತ್ಯ ಭಾಗದಲ್ಲಿ ವ್ಯಕ್ತವಾದ ವಿಭಿನ್ನ ಭಾವಗಳನ್ನು ಪರಿಭಾವಿಸಿ.

೪. ಸಮಕಾಲೀನ ರಾಜಕಾರಣದಲ್ಲಿ ಭರತ–ಬಾಹುಬಲಿ ಪ್ರಸಂಗವನ್ನು ಹೋಲುವ ಸನ್ನಿವೇಶಗಳನ್ನು ಯಾವ ರೀತಿ ವಿಮರ್ಶಿಸುವಿರಿ?

೫. ಕೊನೆಗೂ ಗೆಲ್ಲುವುದು ಯಾವುದು? ಅಧಿಕಾರವೊ, ಬಾಂಧವ್ಯವೊ? ಇದರ ಮೂಲಕ ಪಂಪ ನೀಡುವ ಸಂದೇಶವೇನು? ನಾವು ಪ್ರಸ್ತುತದಲ್ಲಿ ಅದನ್ನು ಒಪ್ಪಬಹುದೆ?

೬. ಬಾಹುಬಲಿಗೆ ವೈರಾಗ್ಯ ಉಂಟಾದ ಸನ್ನಿವೇಶವನ್ನು ವಿವರಿಸಿ.

*



# ೨. ವಚನಗಳು

**ಆಶಯ :**

ಈ ಜಗತ್ತಿನಲ್ಲಿ ಸುಂದರವಾದ ಜೀವನಸಾಗಿಸುವ ಶಿಕ್ಷಣವನ್ನು ಪ್ರಕೃತಿ ತನ್ನ ಚಟುವಟಿಕೆಗಳ ಮೂಲಕ ಮಾಗದರ್ಶನ ನೀಡುತ್ತಿದೆ ಅದನ್ನು ಸೂಕ್ಷ್ಮವಾಗಿ ಗ್ರಹಿಸಬೇಕಷ್ಟೆ. ಆಗ ಮಾತ್ರ ವೈಶಾಲ್ಯತೆ ಮೂಡುತ್ತದೆ ನಿಸ್ವಾರ್ಥತೆ ಬೆಳಗುತ್ತದೆ ಹಾಗೂ ಭೇದಭಾವಗಳು ಮರೆಯಾಗುತ್ತವೆ.

ಈ ಭೂಮಿಯಲ್ಲಿ ವಾಸಿಸುವ ಹಕ್ಕು ಎಲ್ಲ ಜೀವಿಗಳಿಗೂ ಇದೆ. ಇಲ್ಲಿ ಯಾರೂ–ಯಾವುದೂ ಶಾಶ್ವತವಲ್ಲ, ಇರುವಷ್ಟುಕಾಲ ಎಲ್ಲರೊಳಗೆ ಒಂದಾಗಿ ಬದುಕಿದರೆ ಅದೇ ಸ್ವರ್ಗ ಎಂಬುದನ್ನು 12ನೇ ಶತಮಾನದ ಶರಣರು ತಮ್ಮ ಜೀವನಾನುಭವ ಹಾಗೂ ಆಧ್ಯಾತ್ಮಿಕ ಚಿಂತನೆಗಳ ಮೂಲಕ ಜನಸಾಮಾನ್ಯರನ್ನು ಎಚ್ಚರಿಸುವ ಕ್ರಾಂತಿಕಾರೀ ಚಿಂತಕರು ಹಾಗೂ ಸಮಾಜ ಸುಧಾರಕರಾಗಿದ್ದಾರೆ.

**ಬಸವಣ್ಣ**

ಹಬ್ಬಕ್ಕೆ ತಂದ ಹರಕೆಯ ಕುರಿ
ತೋರಣಕ್ಕೆ ತಂದ ತಳಿರ ಮೇಯಿತ್ತು
ಕೊಂದಹರೆಂಬುದನರಿಯದೆ
ಬೆಂದ ಒಡಲ ಹೊರೆವುತ್ತಲ್ಲದೆ
ಅಂದಂದೆ ಹುಟ್ಟಿತ್ತು, ಅಂದಂದೆ ಹೊಂದಿತ್ತು
ಕೊಂದವರುಳಿದರೆ ಕೂಡಲಸಂಗಮದೇವ

ಕಾಲಲಿ ಕಟ್ಟಿದ ಗುಂಡು, ಕೊರಳಲಿ ಕಟ್ಟಿದ ಬೆಂಡು,
ತೇಲಲೀಯದು ಗುಂಡು, ಮುಳುಗಲೀಯದು ಬೆಂಡು,
ಇಂತಪ್ಪ ಸಂಸಾರ ಶರಧಿಯ ದಾಂಟಿಸಿ
ಕಾಲಾಂತಕನೆ ಕಾಯೋ, ಕೂಡಲಸಂಗಮದೇವಯ್ಯಾ

ಹಾವಾಡಿಗನು ಮೂಕೊರತಿಯು; ತನ್ನ ಕೈಯಲ್ಲಿ ಹಾವು,
ಮಗನ ಮದುವೆಗೆ ಶಕುನವ ನೋಡಹೋಹಾಗ
ಇದಿರಲೊಬ್ಬ ಮೂಕೊರತಿಯ ಹಾವಾಡಿಗನ ಕಂಡು,
ಶಕುನ ಹೊಲ್ಲೆಂಬ ಚದುರನ ನೋಡಾ.
ತನ್ನ ಸತಿ ಮೂಕೊರತಿ, ತನ್ನ ಕೈಯಲ್ಲಿ ಹಾವು,
ತಾನು ಮೂಕೊರೆಯ.
ತನ್ನ ಭಿನ್ನವನರಿಯದೆ ಅನ್ಯರನೆಂಬ
ಕುನ್ನಿಯನೇನೆಂಬೆ ಕೂಡಲಸಂಗಮದೇವಾ.

**ಆಯ್ದಕ್ಕಿ ಮಾರಯ್ಯ**

ಕಾಯಕದಲ್ಲಿ ನಿರತನಾದಡೆ, ಗುರುದರ್ಶನವಾದಡೂ ಮರೆಯಬೇಕು,
ಲಿಂಗಪೂಜೆಯಾದಡೂ ಮರೆಯಬೇಕು,
ಜಂಗಮ ಮುಂದೆ ನಿಂದಿದ್ದಡೂ ಹಂಗ ಹರಿಯಬೇಕು.
ಕಾಯಕವೆ ಕೈಲಾಸವಾದ ಕಾರಣ.
ಅಮರೇಶ್ವರಲಿಂಗವಾಯಿತ್ತಾದಡೂ ಕಾಯಕದೊಳಗು.

ಕಟ್ಟಿಗೆ ಕಸ ನೀರು ತಂದು,
ಸತ್ಯರ ಮನೆಯಲ್ಲಿ ಒಕ್ಕುದನೀಸಿಕೊಂಡು,
ತನ್ನ ಕೃತ್ಯ ತಪ್ಪದೆ ಒಕ್ಕುದ ಕೊಂಡು,
ಸತ್ಯನಾಗಿಪ್ಪ ಭಕ್ತನಂಗವೆ ಅದು ಅಮರೇಶ್ವರಲಿಂಗದ ಸಂಗ.

**ಅಮುಗೆ ರಾಯಮ್ಮ**

ಕಾದಹಾಲ ನೊಣ ಮುಟ್ಟಬಲ್ಲುದೆ?
ಕಿಚ್ಚಿನೊಳಗಣ ಗುಂಡ ಬೆಕ್ಕು ಮುಟ್ಟಬಲ್ಲುದೆ?
ಮರುಜವಣಿಯ ಕಡ್ಡಿ ಕಯ್ಯಲಿದ್ದವಂಗೆ ಸರ್ಪ ಕಡಿಯಬಲ್ಲುದೆ?
ಈ ತ್ರಿವಿಧವನರಿದವಂಗೆ ಹಿಂದೆ ಶಂಕೆಯಿಲ್ಲ, ಮುಂದೆ ಭೀತಿಯಿಲ್ಲ
ಕಳಂಕು ಇಲ್ಲದೆ ಅಮುಗೇಶ್ವರಲಿಂಗವು ಅಪ್ಪಿಕೊಂಡಿತ್ತು.
ಎನ್ನ ಕಣ್ಣೊಳಗಣ ಕಟ್ಟಿಗೆಯ ಮುರಿವವರನಾರನೂ ಕಾಣೆ,
ಎನ್ನ ಕಾಲೊಳಗಣ ಮುಳ್ಳ ತೆಗೆವವರನಾರನೂ ಕಾಣೆ,
ಎನ್ನ ಅಂಗದಲ್ಲಿಪ್ಪ ಅಹಂಕಾರವ ಸುಡುವವರನಾರನೂ ಕಾಣೆ,
ಎನ್ನ ಮನದಲ್ಲಿಪ್ಪ ಮಾಯಾಪ್ರಪಂಚುವ



ಕೆಡಿಸುವವರನಾರನೂ ಕಾಣೆನಯ್ಯಾ,
ಆದ್ಯರ, ವೇದ್ಯರ ವಚನಗಳಿಂದ
ಅರಿದೆವೆಂಬವರು ಅರಿಯಲಾರರು ನೋಡಾ,
ಎನ್ನ ಕಣ್ಣೊಳಗಣ ಕಟ್ಟಿಗೆಯ ನಾನೆ ಮುರಿಯಬೇಕು,
ಎನ್ನ ಕಾಲೊಣಗಣ ಮುಳ್ಳ ನಾನೆ ತೆಗೆಯಬೇಕು,
ಎನ್ನ ಅಂಗದಲ್ಲಿಪ್ಪ ಅಹಂಕಾರವ ನಾನೆ ಸುಡಬೇಕು,
ಎನ್ನ ಮನದಲ್ಲಿಪ್ಪ ಮಾಯಾಪ್ರಪಂಚುವ ನಾನೆ ಕಳೆಯಬೇಕು,
ಅಮುಗೇಶ್ವರಲಿಂಗವ ನಾನೆ ಅರಿಯಬೇಕು.

## ಕವಿ ಪರಿಚಯ

**ಬಸವಣ್ಣ :** ಬಸವಣ್ಣನವರು ಹನ್ನೆರಡನೆಯ ಶತಮಾನದ ಸಮಾಜೋ–ಧಾರ್ಮಿಕ ಆಂದೋಲನದ ಕೇಂದ್ರ ವ್ಯಕ್ತಿ. ವಿಜಾಪುರ ಜಿಲ್ಲೆಯ ಬಾಗೇವಾಡಿ ಇವರ ಜನ್ಮ ಸ್ಥಳ, ತಂದೆ ಮಾದರಸ, ತಾಯಿ ಮಾದಲಾಂಬಿಕೆ, ಕಲಚೂರಿ ರಾಜವಂಶದ ಬಿಜ್ಜಳನ ಆಸ್ಥಾನದಲ್ಲಿ ಮಹಾಮಂತ್ರಿಯಾಗಿದ್ದರು. ಮೌಲಿಕವಾದ ವಚನ ರಚನೆಯ ಮೂಲಕ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದವರು. ಏಕದೇವೋಪಾಸನೆ, ಅಸ್ಪೃಶ್ಯತಾ ನಿವಾರಣೆ, ವೃತ್ತಿಮರ್ಯಾದೆ, ವ್ಯಕ್ತಿಗೌರವ, ಸ್ತ್ರೀ ಸಮಾನತೆ, ಕಾಯಕ ಮಹತ್ವ, ಮೌಢ್ಯ ಖಂಡನೆ, ಮಾನವೀಯತೆ – ಈ ಮೊದಲಾದ ಜೀವನ ಮೌಲ್ಯಗಳನ್ನು ತಮ್ಮ ವಚನಗಳ ಮೂಲಕ ಅಭಿವ್ಯಕ್ತಿಸಿದ್ದಾರೆ. 'ಕೂಡಲಸಂಗಮದೇವ' ಇವರ ವಚನಗಳ ಅಂಕಿತ.

**ಆಯ್ದಕ್ಕಿ ಮಾರಯ್ಯ (ಕ್ರಿ.ಶ. ೧೧೬೦) :** ೧೨ನೇ ಶತಮಾನದ ವಚನಕಾರನಾದ ಈತ ರಾಯಚೂರು ಜಿಲ್ಲೆ ಅಮರೇಶ್ವರದವನು. ಆಯ್ದಕ್ಕಿ ಲಕ್ಕಮ್ಮ ಇವನ ಬಾಳಸಂಗಾತಿ. ಬಸವಣ್ಣನವರ ಚಳವಳಿಗೆ ಆಕರ್ಷಿತನಾಗಿ ಕಲ್ಯಾಣಕ್ಕೆ ಬಂದನು. ಅಕ್ಕಿ ಆಯುವ ಕಾಯಕ ಮಾಡುತಿದ್ದ ಈತನು ಅಮರೇಶ್ವರ ಲಿಂಗ ಅಂಕಿತದಲ್ಲಿ ವಚನಗಳನ್ನು ಬರೆದಿದ್ದಾನೆ. ಶರಣ ಲೋಕದಲ್ಲಿ ವಿಖ್ಯಾತವಾಗಿರುವ ಕಾಯಕವೇ ಕೈಲಾಸವೆಂಬ ಅರ್ಥಪೂರ್ಣವಾದ ಸಂದೇಶವನ್ನು ಕೊಟ್ಟ ಈತ ಅದೇ ರೀತಿ ಬದುಕಿ ಸದಾಕಾಲಕ್ಕೂ ಆದರ್ಶವಾಗಿದ್ದಾನೆ.

**ಅಮುಗೆ ರಾಯಮ್ಮ (೧೧೬೦) :** ಶಿವಶರಣರು ತಮ್ಮ ವೈಚಾರಿಕ ಪ್ರಜ್ಞೆಯಿಂದ ಸಾಮಾಜಿಕ ಕಳಕಳಿ ಹೊಂದುವ ಮೂಲಕ ಸಮಾಜ ಸುಧಾರಕರಾದರು. ಕಾಯಕ ತತ್ವವನ್ನೇ ಅಡಿಗಲ್ಲಾಗಿಸಿಕೊಂಡವರು. ಇದಕ್ಕೆ ಗಂಡು–ಹೆಣ್ಣು ಎಂಬ ಸಾಮಾಜಿಕ ವರ್ಗೀಕರಣಕ್ಕೂ ಚೌಕಟ್ಟನ್ನೂ ಮೀರಿದ ಫಲವೇ ಅಕ್ಕಮಹಾದೇವಿ,

ಅಯ್ದಕ್ಕಿ ಲಕ್ಕಮ್ಮ, ದುಗ್ಗಳೆ, ಅಕ್ಕನಾಗಮ್ಮ, ಸತ್ಯಕ್ಕೆ ಮುಕ್ತಾಯಕ್ಕೂ ಮುಂತಾದ ವಚನಕಾರ್ತಿಯರು ವಚನ ರಚನೆಗೆ ಮುಂದಾದರು ಅವರಲ್ಲಿ ಅಮುಗೆ ರಾಯಮ್ಮನೂ ಒಬ್ಬರು ಈಕೆ ಸೊನ್ನಲಿಗೆಯವಳು (ಈಗಿನ ಸೊಲ್ಲಾಪುರ) ಇವಳ ಪತಿ ಅಮುಗೆ ದೇವಯ್ಯ, ನೇಯ್ಗೆ ಇವರ ಕಾಯಕ. ಇವಳ ಅಂಕಿತ ಅಮುಗೇಶ್ವರ. ಇಲ್ಲಿನ ವಚನಗಳಲ್ಲಿ ಆಧ್ಯಾತ್ಮ, ವಿಡಂಬನೆ, ನಿಷ್ಠೂರಗಳನ್ನೂ ಕಾಣಬಹುದು.

**ಅರ್ಥಗಳು :**

ಕಾಲಿನಗುಂಡು=ಸಂಕಷ್ಟ ಹಾಗೂದು, ಖದಸಂಕೇತ; ಬೆಂಡು=ಸುಖದಸಂಕೇತ, ಅಂದರೆ ಸಂಸಾರವು ಕಷ್ಟ–ಸುಖಗಳ ಹಾಗೂ ವ್ಯಾಮೋಹಗಳ ಬಂಧನ.

ತ್ರಿವಿಧ ಕಾದಹಾಲು = ಸ್ವಚ್ಛ, ಶುದ್ಧನಾದ ಗುರು; ಕಿಚ್ಚು=ಶಾಖ ಮತ್ತು ಬೆಳಕನ್ನು ಗರ್ಭೀಕರಿಸಿಕೊಂಡಿರುವ ಲಿಂಗ. (ಗುಂಡು); ಮರುಜವಣಿ = ಚೈತನ್ಯ ಸ್ವರೂಪ ಜಂಗಮ; ನೊಣ, ಬೆಕ್ಕು, ಸರ್ಪ = ಕ್ಷುದ್ರ ವ್ಯಕ್ತಿತ್ವದ ಸಂಕೇತ.

**ಪ್ರಶ್ನೆಗಳು :**

೧. ಸಂಸಾರ ಬಂಧನವನ್ನು ಕುರಿತು ಬಸವಣ್ಣನವರ ಚಿಂತನೆಯನ್ನು ವಿವರಿಸಿ.
೨. ಶಕುನಗಳಂತಹ ಮೌಢ್ಯದ ಬಗೆಗೆ ಬಸವಣ್ಣನವರು ಹೇಗೆ ಪ್ರತಿಕ್ರಿಯಿಸಿದ್ದಾರೆ?
೩. ಬಸವಣ್ಣನವರ ವೈಚಾರಿಕ ಪ್ರಜ್ಞೆ ಕುರಿತು ಬರೆಯಿರಿ.
೪. ತ್ರಿವಿಧಗಳನ್ನು ಕುರಿತಂತೆ ರಾಯಮ್ಮನ ಅಭಿಪ್ರಾಯಗಳನ್ನು ಬರೆಯಿರಿ.
೫. ತನ್ನನ್ನು ತಾನು ಅರಿಯುವ ಬಗೆಯನ್ನು ರಾಯಮ್ಮ ಹೇಗೆ ವಿಶ್ಲೇಷಿಸಿದ್ದಾಳೆ?
೬. ಕಾಯಕದ ಮಹತ್ವ ಹಾಗೂ ಶ್ರೇಷ್ಠತೆಯನ್ನು ಮಾರಯ್ಯ ಹೇಗೆ ವಿಮರ್ಶಿಸಿದ್ದಾನೆ.
೭. ಮರುಜವಣಿ ಎಂದರೆ ಯಾವುದು?

*



# ೩. ದೇವರು ರುಜು ಮಾಡಿದನು

**– ಕುವೆಂಪು**

**ಆಶಯ :**

ಕವಿಯ ಮನಸ್ಸು ಸದಾ ಅಂತರಂಗದ ಜಗತ್ತು ಮತ್ತು ಬಾಹ್ಯದೊಂದಿಗೆ ಅವಿನಾಭಾವ ಸಂಬಂಧವನ್ನು ಹೊಂದಿರುತ್ತದೆ. ಅಮೂರ್ತವಾದ ಭಾವನೆಗಳಿಗೆ ಉಪಮೆ, ರೂಪಕಗಳ ಮೂಲಕ ಅಕ್ಷರಗಳಲ್ಲಿ ಹಿಡಿದಿಟ್ಟು ಕವಿ ಮೂರ್ತರೂಪಗೊಳಿಸುತ್ತಾನೆ. ಮನಸ್ಸು ಭಾವಪರವಶವಾದಾಗ ಪ್ರತಿಭೆಯ ಬೆಳಕಿನ ಸಹಾಯದೊಂದಿಗೆ ಕಲ್ಪನೆಯ ವಿಲಾಸದಲ್ಲಿ ತೊಡಗಿ ಕಾವ್ಯಸೃಷ್ಟಿಗೆ ಮುಂದಾಗುತ್ತಾನೆ. ಅಂತಹ ಸುಂದರವಾದ ಭಾವಗೀತೆಯೇ, ಕುವೆಂಪು ಅವರ 'ದೇವರು ರುಜು ಮಾಡಿದನು' ಎಂಬ ಕಾವ್ಯ ನಮಗೆ ಕಟ್ಟಿಕೊಡುತ್ತದೆ.

ದೇವರು ರುಜು ಮಾಡಿದನು;
ರಸವಶನಾಗುತ ಕವಿ ಅದ ನೋಡಿದನು!

ಬಿತ್ತರದಾಗಸ ಹಿನ್ನೆಲೆಯಾಗಿರೆ
ಪರ್ವತದೆತ್ತರ ಸಾಲಾಗೆಸೆದಿರೆ
ಕಿಕ್ಕಿರಿದಡವಿಗಳಂಚಿನ ನಡುವೆ
ಮೆರೆದಿರೆ ಜಲಸುಂದರಿ ತುಂಗೆ
ದೇವರು ರುಜು ಮಾಡಿದನು,
ರಸವಶನಾಗುತ ಕವಿ ಅದ ನೋಡಿದನು!

ನದಿ ಹರಿದಿತ್ತು; ಬನ ನಿಂತಿತ್ತು;
ಬಾನ್ ನೀಲಿಯ ನಗೆ ಬೀರಿತ್ತು.
ನಿರ್ಜನ ದೇಶದ ನೀರವ ಕಾಲಕೆ
ಖಗರವ ಪುಲಕಂ ತೋರಿತ್ತು.
ಹೂಬಿಸಿಲಲಿ ಮಿರುಗಿರೆ ನಿರಿವೊನಲು
ಮೊರೆದಿರೆ ಬಂಡೆಗಳಲಿ ನೀರ್ದೊದಲು
ರಂಜಿಸೆ ಇಕ್ಕೆಲದಲಿ ಹೊಮ್ಮಳಲು

ಸಿಬ್ಬಲು ಗುಡ್ಡೆಯ ಹೊಳೆಯಲಿ ಮಿಯುತ
ಕವಿಮನ ನಾಕದಿ ನೆಲಸಿತ್ತು;
ಮಧು ಸೌಂದರ್ಯದ ಮಧುರ ಜಗತ್ತು
ಹೃದಯ ಜಿಹ್ವೆಗೆ ಜೇನಾಗಿತ್ತು!

ದೃಶ್ಯದಿಗಂತದಿನೊಮ್ಮೆಯೆ ಹೊಮ್ಮಿ
ಗಿರಿವನ ಪಟದಾಕಾಶದಲಿ
ತೇಲುತ ಬರಲ್ಕೆ ಬಲಾಕಪಂಕ್ತಿ
ಲೇಖನ ರೇಖಾನ್ಯಾಸದಲಿ,
ಅವಾಙ್ಮಯ ಛಂದಃಪ್ರಾಸದಲಿ,
ಸೃಷ್ಟಿಯ ರಚನೆಯ ಕುಶಲಕೆ ಚಂದಕೆ
ಜಗದಚ್ಚರಿಯಂದದ ಒಪ್ಪಂದಕೆ
ಚಿರಚೇತನ ತಾನಿಹೆನೆಂಬಂದದಿ
ಬೆಳ್ಳಕ್ಕಿಯ ಹಂತಿಯ ಆ ನೆವದಿ
ದೇವರು ರುಜು ಮಾಡಿದನು:
ರಸವಶನಾಗುತ ಕವಿ ಅದ ನೋಡಿದನು!"*

## ಕವಿ ಪರಿಚಯ

**ಕುವೆಂಪು (೧೯೦೪–೧೯೯೪) :** ಕನ್ನಡ ನವೋದಯ ಕಾಲದ ಹರಿಕಾರರಲ್ಲಿ ಪ್ರಮುಖರಾದ ಕುವೆಂಪು ಅವರು ಹೊಸಗನ್ನಡ ಸಾಹಿತ್ಯದ ಶ್ರೀಮಂತಿಕೆಯನ್ನು ಹೆಚ್ಚಿಸಿ ಹೊಸ ಮೌಲ್ಯಗಳನ್ನು ರೂಪಿಸಿಕೊಟ್ಟವರು. ಮೈಸೂರು ವಿ.ವಿಯಲ್ಲಿ ಕನ್ನಡ ಪ್ರಾಧ್ಯಾಪಕರಾಗಿ, ಕುಲಪತಿಗಳಾಗಿ ಸೇವೆಸಲ್ಲಿಸಿದ್ದಾರೆ.

ಸಾಮಾಜಿಕ ಕಳಕಳಿ ಹಾಗೂ ವೈಚಾರಿಕ ಪ್ರಜ್ಞೆಯ ಶ್ರೀಯುತರು ಪ್ರಕೃತಿಪ್ರೇಮಿ. ಅವರ ಕಾವ್ಯ, ಕತೆ, ಕಾದಂಬರಿಗಳಲ್ಲಿ ಸಹಜವಾಗಿ ನಿಸರ್ಗ ವರ್ಣನೆ ಇರುತ್ತದೆ. ನವಿಲು, ಕಲಾಸುಂದರಿ, ಪಕ್ಷಿಕಾಶಿ, ಅನಿಕೇತನ, ಕೋಗಿಲೆ ಮತ್ತು ಸೋವಿಯತ್‌ರಷ್ಯಾ, ಮುಂತಾದ ಕಾವ್ಯಕೃತಿಗಳು ಹಾಗೂ ಕಾನೂರು ಸುಬ್ಬಮ್ಮ ಹೆಗ್ಗಡತಿ, ಮಲೆಗಳಲ್ಲಿ ಮದುಮಗಳು, ಕಾದಂಬರಿಗಳಲ್ಲದೆ ಶೂದ್ರತಪಸ್ವಿ, ಬೆರಳ್‌ಗೆಕೊರಳ್, ರಕ್ತಾಕ್ಷಿ ಮುಂತಾದ ನಾಟಕಗಳು, ಲೇಖನಗಳು, ಪ್ರಬಂಧಗಳನ್ನು ರಚಿಸುವ ಮೂಲಕ ಸಾಹಿತ್ಯ ಸರಸ್ವತಿಯ ಆರಾಧಕರಾಗಿದ್ದಾರೆ.



ಇವರ 'ಶ್ರೀರಾಮಾಯಣ ದರ್ಶನಂ' ಕೃತಿಗೆ 'ಜ್ಞಾನಪೀಠ' ಪ್ರಶಸ್ತಿ ಲಭಿಸಿದೆ. ಹಾಗೂ ಇವರ ಸಾಹಿತ್ಯ ಮತ್ತು ಸಾಂಸ್ಕೃತಿಕ ಕೊಡುಗೆಗಳನ್ನು ಗುರ್ತಿಸಿ ಕೇಂದ್ರಸರ್ಕಾರವು 'ರಾಷ್ಟ್ರಕವಿ', 'ಪದ್ಮಭೂಷಣ' ಪ್ರಶಸ್ತಿ–ಪುರಸ್ಕಾರಗಳನ್ನು ನೀಡಿ ಗೌರವಿಸಿದೆ.

**ಪ್ರಶ್ನೆಗಳು :**

೧. ಪ್ರಕೃತಿಯ ಸೌಂದರ್ಯ ಕವಿಯನ್ನು ಕೌತುಕಗೊಳಿಸಿದ ಬಗೆಯನ್ನು ವಿಶ್ಲೇಷಿಸಿ?

೨. ಬೆಳ್ಳಕ್ಕಿಗಳ ಸಾಲನ್ನು ಕಂಡ ಕವಿಯ ಮನಸ್ಸಿಗೆ ಮೂಡಿದ ಭಾವವೇನು?

೩. ಭೂಮಿ–ಆಗಸಗಳ ಸೌಂದರ್ಯ ಕುರಿತು ನಿಮ್ಮ ಮಾತುಗಳಲ್ಲಿ ಬರೆಯಿರಿ.

*

# ೪. ಕವನ ಹುಟ್ಟುವ ಸಮಯ.

**– ಕೆ.ಎಸ್. ನರಸಿಂಹಸ್ವಾಮಿ**

**ಆಶಯ :**

ಬದುಕಿನ ಅನುಭವಗಳಿಗೆ ಪ್ರತಿಭೆ ಬೆಳಕಾದಾಗ ಹೊಸ-ಹೊಸಚಿಂತನೆಗಳು ಅರಳಿ ಮಾತು-ಮಾತು ಮಥಿಸಿದಾಗಲೇ ಕಾವ್ಯ ಸೃಷ್ಟಿಯಾಗುತ್ತದೆ. ಎಂಬುದನ್ನೇ "ಪ್ರಜ್ಞಾನವನವೋನ್ಮೇಶ ಶಾಲಿನಿ" ಎನ್ನುತ್ತೇವೆ. ಅಮೂರ್ತವಾದ ಭಾವನೆಗಳನ್ನು ಕವಿಯು, ಪ್ರತಿಮೆ-ಸಂಕೇತಗಳನ್ನು ಬಳಸಿಕೊಂಡು ತನ್ನ ಶಬ್ಧಭಂಡಾರದ ಮೂಲಕ ಹಿಡಿದಿಟ್ಟಾಗಲೇ ಭಾವಗೀತೆಯಾಗಿರುತ್ತದೆ, ಎಂಬುದನ್ನು ಆಂಗ್ಲಕವಿ 'ವರ್ಡ್ಸ್‌ವರ್ತ್' "pretry is the spontanious over flow of powerful feelings" – ಎಂದು ಕಾವ್ಯಸೃಜನೆಯ ತತ್ತ್ವವನ್ನು ಹೇಳಿದ್ದಾನೆ.

ಬಿದಿರ ತಡಿಕೆಯ ಹಿಂದೆ ಬಿಚ್ಚಲಾಗದ ಕಣ್ಣು
'ಕವನ ಹುಟ್ಟಿತೆ?' ಎಂದು ಕೇಳುತ್ತಿದೆ.
ನಾನೀಗ ತುಟಿಯಂಚಿನಲ್ಲಿ ಹೇಳಿದ್ದಿಷ್ಟೆ:
ಇನ್ನೊಂದು ದಿವಸ ಕಾದರೆ ನಷ್ಟವೆ?

ಅನುಭವದ ಆಯ್ಕೆ ಮುಗಿದಿತ್ತು. ಒದಗಿರಲಿಲ್ಲ
ತಕ್ಕಂಥ ಮಾತು. ಕಾಯುತ್ತ ನಿಂತೆ.
ಅಬ್ಬರಗಳನ್ನು ದಾಟಿದ ಗಟ್ಟಿ ಪಂಕ್ತಿಗಳ
ಸಹಜ ಸಂಚಾರಗಳ ಕನಸ ಕಂಡೆ.

ಆಳದನುಭವವನ್ನು ಮಾತು ಕೈಹಿಡಿದಾಗ,
ಕಾವು ಬೆಳಕಾದಾಗ ಒಂದು ಕವನ.
ನಾನು ಬಯಲಿಗೆ ಬಂದು ಕಾದು ನಿಂತಿದ್ದೇನೆ;
ಬರುವದಿದೆ ಸರಿಯಾದ ವರ್ತಮಾನ.

ಇಂಥ ಅಂಗಡಿಯಲ್ಲಿ ಈ ಮಾತಿಗಷ್ಟೆ ಬೆಲೆ
ಎನ್ನುವುದು ಮೊದಲು ಗೊತ್ತಾಗಲಿಲ್ಲ.



ಒಂದೊಂದು ಮಾತಿಗೊಂದೊಂದು ಇತಿಹಾಸವಿದೆ;
ನಾನು ಬೇರಿನ ತನಕ ಹೋಗಲಿಲ್ಲ.

ಕಾಯುವುದು ಕಷ್ಟವೂ ಅಲ್ಲ. ನಕ್ಷತ್ರಗಳು
ಅದಿಯಿಂದಲೂ ಹೀಗೆ ಕಾಯುತ್ತಿವೆ.
ಕವನ ಹುಟ್ಟುವ ಸಮಯದಲ್ಲಿ ನನ್ನಿಂದಲೇ
ಆಗಬೇಕಾಗಿದ್ದಲ್ಲಿ ನೂರಾರಿವೆ–

ನನ್ನ ತೊಡಕುಗಳನ್ನೆ ಅರಿಯದೆ ಪರಿಧಾವಿ
ಧಾವಿಸುತ್ತಿದೆ ತನ್ನ ಶಿಶಿರದೆಡೆಗೆ.
ಅಶರೀರ ಭಾವಕ್ಕೆ ಇಷ್ಟರೂಪವ ತೊಡಿಸಿ
ಕಳಿಸಿ ಕೊಡಲಾದೀತೆ ನಾಳೆಯೊಳಗೆ?

### ಕವಿ ಪರಿಚಯ

**ಕೆ.ಎಸ್. ನರಸಿಂಹಸ್ವಾಮಿ :** ಮಂಡ್ಯ ಜಿಲ್ಲೆ ಕಿಕ್ಕೇರಿಯಲ್ಲಿ ೧೯೧೫ರಂದು ಜನಿಸಿದ ಕೆ.ಎಸ್. ನರಸಿಂಹಸ್ವಾಮಿಯವರು, ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಬಿ.ಎ. ವ್ಯಾಸಂಗ ಮಾಡಿ, ಸರ್ಕಾರಿ ಸೇವೆಗೆ ಆಯ್ಕೆಯಾದರು. ಮಲ್ಲಿಗೆ ಮನಸ್ಸಿನ ಕೆ.ಎಸ್.ನ. ಅವರು ನವಿರಾದ ಪ್ರೀತಿ, ಪ್ರೇಮ, ಪ್ರಣಯ ಹಾಗೂ ದಾಂಪತ್ಯದ ಅನುಭವಗಳ ಫಲುಕುಗಳನ್ನು ತಮ್ಮ ಕಾವ್ಯದಲ್ಲಿ ಪ್ರತಿಬಿಂಬಿಸಿದವರು. ನವ್ಯಸಾಹಿತ್ಯದ ಆಶಯಗಳನ್ನೊಳಗೊಂಡ ಇವರ ಪ್ರಮುಖ ಕಾವ್ಯಗಳೆಂದರೆ, ಮೈಸೂರು ಮಲ್ಲಿಗೆ, ದೀಪದ ಮಲ್ಲಿ, ತೆರೆದ ಬಾಗಿಲು, ಶಿಲಾಲತೆ, ಮುಂತಾದುವು.

**ಪ್ರಶ್ನೆಗಳು :**

೧. ಕವನ ಹುಟ್ಟಲು ಅಗತ್ಯವಾದ ಪರಿಕರ ಮತ್ತು ಸಮಯವನ್ನು ಕವಿ ಹೇಗೆ ವಿಶ್ಲೇಷಿಸಿದ್ದಾರೆ?

೨. ಅನುಭವ ಮತ್ತು ಶಬ್ದಸಂಪತ್ತಿನ ಅವಿನಾಭಾವ ಸಂಬಂಧ ಕುರಿತು ವಿವರಿಸಿ?

೩. ಭಾವಕ್ಕೆ ತಕ್ಕ ಪದ ಮತ್ತು ಅರ್ಥಗಳನ್ನು ಕುರಿತಂತೆ ಕವಿ ಹೇಗೆ ಹೇಳಿದ್ದಾರೆ?

೪. ಅಮೂರ್ತಭಾವವನ್ನು ಮೂರ್ತರೂಪಗೊಳಿಸುವ ಬಗೆಯನ್ನು ಕವಿಯ ಮಾತಿನಲ್ಲಿ ಬರೆಯಿರಿ.

೫. ಕವನ ಹುಟ್ಟುವ ಬೆರಗು ಕವಿತೆಯಲ್ಲಿ ಹೇಗೆ ಪ್ರಕಟವಾಗಿದೆ ವಿವರಿಸಿ.

*